# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

## ಪಿ.ಸಿ.ಆರ್. ನಂ.4104/2018 ಚಾ ಸಾ-1

| | |
|---|---|
| **ಸಾಕ್ಷಿದಾರರ ಹೆಸರು** | **ಎಸ್. ಮಂಜುನಾಥ** |
| **ತಂದೆಯ ಹೆಸರು** | **ಲಿಂಗಪ್ಪ** |
| **ವಯಸ್ಸು** | **77 ವರ್ಷ** |
| **ಉದ್ಯೋಗ** | **ನಿರ್ದೇಶಕರು. ಲೇಸರ್ ಇವೆಂಟ್ಸ್ ಪ್ರೈವೇಟ್ ಲಿಮಿಟೇಡ್** |
| **ವಾಸ** | **ಬಸವೇಶ್ವರ ನಗರ, ಬೆಂಗಳೂರು** |
| **ಪ್ರಮಾಣೀಕರಿಸಿದ ದಿನಾಂಕ** | **18.04.2024** |

**<u>ದಂ.ಪ್ರ.ಸಂ.ಕಲಂ. 200 ರಡಿಯಲ್ಲಿ ಸಾಕ್ಷಿಗೆ ಪ್ರಮಾಣ ಪೂರ್ವಕ ಹೇಳಿಕೆ:</u>**

2008 ರಲ್ಲಿ ನಾನು ನನ್ನ ವಾಸದ ಮನೆಯನ್ನು ಅಡಮಾನ ಮಾಡಿ ರೂ.1 ಕೋಟಿ ಪಡೆದು ಲೇಸರ್ ಇವೆಂಟ್ಸ್ ಪ್ರೈವೇಟ್ ಲಿಮಿಟೇಡ್ ಗೆ ನಿರ್ದೇಶಕನಾಗಿರುತ್ತೇನೆ. ಸದರಿ ಕಂಪನಿಯನ್ನು ಹರೀಶ್ ಪಾಂಡುರಂಗ ಚಾರ್ ಮತ್ತು ಕುಮಾರ್ ಎನ್ನುವವರು ಸದರಿ ಕಂಪನಿಯಲ್ಲಿ 2006 ರಲ್ಲಿಯೇ ತೆರೆದಿದ್ದರು. ನಾನು ಮೊದಲು ಎನ್.ಜಿ.ಎಫ್ ನಲ್ಲಿ ಕೆಲಸ ಮಾಡುತ್ತಿದ್ದೆ. ಆಗ ಆರೋಪಿ ಸಹ ಇಲ್ಲಿ ಕೆಲಸ ಮಾಡುತ್ತಿದ್ದರು. ನಾವಿಬ್ಬರು ಆತ್ಮೀಯರಾಗಿದ್ದೇವು. ಆದಾದ ನಂತರ ಆರೋಪಿ ಆಸ್ಟ್ರೇಲಿಯಾಗೆ ಹೋಗಿ ನೆಲೆಸಿರುತ್ತಾರೆ. ಆರೋಪಿ ಹರೀಶ್ ಪಾಂಡುರಂಗ ಚಾರ್ ಮತ್ತು ಕುಮಾರ್ ರವರಿಗೆ ಪರಿಚಯವಿರುತ್ತಾರೆ. ನಾನು ನಿರ್ದೇಶಕನಾದಾಗ ಆರೋಪಿ ಭಾರತದಲ್ಲಿಯೇ ಇದ್ದ. ಆ ಕಾರಣ ನಾನು ಆರೋಪಿಯನ್ನು ನನ್ನ ಕಂಪನಿಗೆ ಕೆಲಸ ಮಾಡಿಕೊಂಡು ಇದ್ದರು. ನಾನು ಅವರಿಗೆ ಕಂಪನಿಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಕೊಟ್ಟಿದ್ದೆ. ನಾನು ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ಸಹ ಅವರಿಗೆ ಕೊಡುತ್ತಿದ್ದೆ. ನನ್ನ ಡಿಜಿಟಲ್ ಸಹಿ ಆತನ ಹತ್ತಿರ ಇತ್ತು. ನಮ್ಮ ಅಕೌಂಟೆಂಟ್ ಹಣ ಬೇರೆ ಬೇರೆ ಸಂಬಂಧ ಇಲ್ಲದೇ

ಇರುವ ವ್ಯಕ್ತಿಗಳಿಗೆ ಹೋಗುತ್ತಿದೆ ಅಂತ ಹೇಳಿದರು. ನಾನು ನಮ್ಮ ಚೈನಾ ದ ಒಬ್ಬ ಗ್ರಾಹಕರಿಗೆ ಹಣ ನೀಡುವಂತೆ ಕೇಳಿದಾಗ ಅವರು ಭಾರತಕ್ಕೆ ಬಂದಾಗ ಏರ್ ಪೋರ್ಟ್ ನಲ್ಲಿ ಆರೋಪಿ ಮಹೇಶ್ ಬಾಬು ರವರಿಗೆ ಕೈಗೆ ನಗದಾಗಿ ಹಣ ಕೊಟ್ಟಿರುವುದಾಗಿ ಹೇಳಿದರು. ಆಗ ನನಗೆ ಆರೋಪಿಯ ಮೇಲೆ ಸಂದೇಹ ಬಂದು ಪರಿಶೀಲನೆ ಮಾಡಿದಾಗ ಆರೋಪಿ ಆತ ಹಿಂದೆ ಕೆಲಸ ಮಾಡುತ್ತಿದ್ದ ಕಂಪನಿಯವರ ಹತ್ತಿರ ಸಾಲ ಮಾಡಿಕೊಂಡಿದ್ದ ನನ್ನ ಖಾತೆಯಿಂದ ಅವರೆಲ್ಲಾರಿಗೂ ಹಣವನ್ನು ವರ್ಗಾವಣೆ ಮಾಡಿದ್ದ.

2. ಅದು ಅಲ್ಲ ಭೂಪಾಲ್ ನಲ್ಲಿರುವ ಒಬ್ಬ ಗ್ರಾಹಕರು ನನಗೆ ಹಣ ಕೊಡಬೇಕಾಗಿತ್ತು, ಆಗ ನಾನು ಅವರಿಗೆ ಹಣ ಕೇಳಿದಾಗ ಮಹೇಶ್ ಬಾಬು ರವರು ತಮ್ಮ ಖಾತೆ ನಂಬರ್ ಕೊಟ್ಟು ಹಣವನ್ನು ವರ್ಗಾವಣೆ ಮಾಡಿಕೊಂಡಿರುತ್ತಾರೆ ಎಂದು ಹೇಳಿದರು. ಮಹೇಶ್ ಬಾಬು ಅವರಿಗೆ ನೀಡಿದ ಪತ್ರವನ್ನು ಸಹ ನನಗೆ ನೀಡಿದರು. ಈ ಪರಿಶೀಲನೆ ಮಾಡಲಾಗಿ ಆರೋಪಿ ಆತನ ಸಂಬಂಧಿಕರಿಗೆ, ಸ್ನೇಹಿತರಿಗೆ, ಮಗಳು, ಅಳಿಯರವರಿಗೆ ಒಟ್ಟು ರೂ.50 ಲಕ್ಷಗಳನ್ನು ಕಳುಹಿಸಿರುವುದು ಗೊತ್ತಾಯಿತು. ಆದಾದ ನಂತರ ಆತ ತಾನೇ ಕಂಪನಿಯನ್ನು ತೆಗೆದುಕೊಳ್ಳಬೇಕು ಅಂತ ನಮ್ಮ ಇನ್ನೊಬ್ಬ ಡೈರೆಕ್ಟರ್ ರವರನ್ನು ಕಿಡ್ನಾಪ್ ಮಾಡಲು ಪ್ರಯತ್ನ ಪಟ್ಟಿರುತ್ತಾರೆ. ಈ ರೀತಿ ಆರೋಪಿ ನಮ್ಮ ಕಂಪನಿಯ ಹಣವನ್ನು ತನಗೆ ಬೇಕಾದವರಿಗೆ ವರ್ಗವಣೆ ಮಾಡಿ ತನ್ನ ಸ್ವಂತಕ್ಕೆ ದುರುಪಯೋಗ ಪಡಿಸಿಕೊಂಡು ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾನೆ. ಆದ್ದರಿಂದ ಆತನ ವಿರುದ್ದ ಕ್ರಮ ಕೈ ಗೊಳ್ಳಲು ವಿನಂತಿಸಿಕೊಳ್ಳುತ್ತೇನೆ. ನಾನು ಈಗಾಗಲೇ ದಾಖಲೆಗಳ ನಕಲು ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪರಿಶೀಲಿಸಲು ವಿನಂತಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು.)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**

Complainant present and examined as CW-1. Sworn statement . Closed.

For Hearing. Call on 01.06.2024.

III Addl.C.M.M, Bengaluru.